## ನನ್ನ ಓದು




**ಮಲ್ಲಿಗೆ ಹೂವಿನ ಸಖ**
**(ಕಥಾಸಂಕಲನ)**
**ಪು: 80 ಬೆ: 80**
**ಪ್ರ: ಸಂಗಾತ ಪುಸ್ತಕ**
**ಅಂಚೆ: ರಾಜೂರ**
**ಗಜೇಂದ್ರಗಡ ತಾಲ್ಲೂಕು**
**ಗದಗ ಜಿಲ್ಲೆ – 582 114**

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.

**ವಿವೇಕ ಶಾನಭಾಗ**

# ಲೌಕಿಕವನ್ನು ಮೀರುವ ಧ್ವನಿಶಕ್ತಿಯ ಕತೆಗಳು

ದಟ್ಟವಾದ ವಿವರಗಳಲ್ಲಿ ಊರಿ ನಿಂತಿರುವ ತಮ್ಮ ಕತೆಗಳು ಯಾವ ಬಿಂದುವಿನಲ್ಲಿ ಲೌಕಿಕವನ್ನು ಮೀರುವ ಧ್ವನಿಶಕ್ತಿಯನ್ನು ಪಡೆದುಕೊಳ್ಳುತ್ತವೆಂಬುದು ಗೊರವರ ಅವರಿಗೆ ಚೆನ್ನಾಗಿ ತಿಳಿದಿದೆ. ಸಾಮಾನ್ಯವೆನಿಸುವ ವಿವರಗಳ ಮೂಲಕ ಕಾಣ್ಕೆಯನ್ನು ಸಾಧಿಸುವುದು ಹೇಗೆಂಬ ತಿಳಿವಳಿಕೆಯು ಉತ್ತಮ ಮತ್ತು ಸಾಮಾನ್ಯ ಕತೆಗಾರರರನ್ನು ಬೇರ್ಪಡಿಸುವ ಒಂದು ಲಕ್ಷಣವಾಗಿದೆ. ಈ ಪ್ರಜ್ಞೆಯಿದ್ದಾಗ ಕತೆಗಾರ ಅನಗತ್ಯವಾದದ್ದನ್ನು ಕತೆಯೊಳಗೆ ತುರುಕದೇ, ಕಾಯಿ ಸಹಜವಾಗಿ ಹಣ್ಣಾಗುವುದಕ್ಕೆ ಸಂಯಮದಿಂದ ಕಾಯುತ್ತಾನೆ. ಇಂಥ ವಿಶೇಷವಾದ ಕಲಾಪ್ರಜ್ಞೆಯಿರುವ ಲೇಖಕ ಟಿ.ಎಸ್. ಗೊರವರ.

'ಮನಸಿನ ವ್ಯಾಪಾರ' ಎಂಬ ಕತೆಯಲ್ಲಿ ತಾನು ಟೋಪಿ ಮಾರಾಟ ಮಾಡುತ್ತಿರುವ ವಿಚಿತ್ರ ಕನಸು ಕಂಡ ಪರಮೇಶಿ ಮಾಸ್ತರನು ಕನಸಿನಲ್ಲಿ ಕಪ್ಪನ್ನು